# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಡಿಸೆಂಬರ್ 12, 2020

ಸಂಪುಟ : 47 ಸಂಚಿಕೆ : 222 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## ಸುಗ್ರೀವಾಜ್ಞೆ ಮೂಲಕ ಗೋಹತ್ಯೆ ತಡೆ ಮಸೂದೆ ಜಾರಿ

ಬೆಂಗಳೂರು, ಡಿ. 11 - ಗೋ ಹತ್ಯೆ ನಿಷೇಧ ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲಾಗುವುದು ಎಂದು ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ ಗೋ ಮಾತೆಗೆ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೋ ಹತ್ಯೆ ನಿಷೇಧ ಮಸೂದೆಗೆ ವಿಧಾನ ಪರಿಷತ್ತಿನಲ್ಲಿ ಅಂಗೀಕಾರ ಪಡೆಯಲು ಸಾಧ್ಯವಾಗಲಿಲ್ಲ. ಸಭಾಪತಿಗಳು ಸದನವನ್ನು ಅನಿರ್ದಿಷ್ಟವಾಗಿ ಮುಂದೂಡಿದ್ದಾರೆ. ಮತ್ತೆ ಸದನ ಕರೆಯುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದು, ಬರುವ ಮಂಗಳವಾರ ಎರಡು ದಿನಗಳ ಕಾಲ ಕಲಾಪ ನಡೆಸಲು ತೀರ್ಮಾನ ಕೈಗೊಂಡಿದ್ದೇವೆ ಎಂದು ಹೇಳಿದ್ದಾರೆ. ಸಭಾಪತಿಯವರು ಸದನದ ನಡವಳಿಕೆಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಸರ್ಕಾರ ತಂದಿರುವ ಕಾಯ್ದೆ ರಾಜ್ಯದಲ್ಲಿ ಶೇ. 90 ರಷ್ಟು ಜನರಿಗೆ ಸಮಾಧಾನ ಮತ್ತು ತೃಪ್ತಿ ತಂದಿದೆ. ಹಿಂದೂ ಧರ್ಮದಲ್ಲಿ ಗೋವುಗಳನ್ನು ಅತ್ಯಂತ ಪೂಜ್ಯ ಭಾವದಿಂದ ನೋಡುವುದು, ಇಡೀ ಜಗತ್ತಿಗೇ ಗೊತ್ತಿರುವ ಸಂಗತಿ ಎಂದು ತಿಳಿಸಿದ್ದಾರೆ.

## ಕೃಷಿ ಕಾಯ್ದೆ ಪರ ಬಿಜೆಪಿ ಅಭಿಯಾನ

ನವದೆಹಲಿ, ಡಿ.11 - ಕೆಲ ರೈತ ಸಂಘಟನೆಗಳು ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸುತ್ತಿರುವ ನಡುವೆ, ಕಾಯ್ದೆಗಳ ಪರವಾಗಿ ದೇಶಾದ್ಯಂತ ಅಭಿಯಾನ ನಡೆಸಲು ಬಿಜೆಪಿ ಮುಂದಾಗಿದೆ.

ಪತ್ರಿಕಾ ಗೋಷ್ಠಿಗಳು ಹಾಗೂ ಸಾರ್ವಜನಿಕ ಸಭೆಗಳ ಮೂಲಕ ಜನರಲ್ಲಿ ಕಾಯ್ದೆಗಳ ಬಗ್ಗೆ ಅರಿವು ಮೂಡಿಸಲಾಗುವುದು. ದೇಶದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಪ್ರತಿಪಕ್ಷಗಳು ಕೃಷಿ ಸುಧಾರಣೆಗಳ ಬಗ್ಗೆ ರೈತರ ದಾರಿ ತಪ್ಪಿಸುತ್ತಿವೆ. ಸ್ವಾರ್ಥ ರಾಜಕೀಯ ಲಾಭಕ್ಕಾಗಿ ರಾಜಕೀಯ ಪಕ್ಷಗಳು ಪ್ರಚೋದಿಸುತ್ತಿವೆ ಎಂದು ಬಿಜೆಪಿ ಆರೋಪಿಸಿದೆ.

ಈಗ ಬಿಜೆಪಿ ದೇಶಾದ್ಯಂತ ಅಭಿಯಾನ ನಡೆಸುವ ಜೊತೆಗೆ ಗ್ರಾಮೀಣ ಭಾಗಗಳಲ್ಲಿ ಸಭೆಗಳನ್ನು ನಡೆಸಲು ಉದ್ದೇಶಿಸಿದೆ.

## ಕೃಷಿ ಕಾಯ್ದೆ ವಿರುದ್ಧ ಕೋರ್ಟ್ ಮೊರೆ

ನವದೆಹಲಿ, ಡಿ. 11 - ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ಪ್ರಶ್ನಿಸಿ ಭಾರತೀಯ ಕಿಸಾನ್ ಯೂನಿಯನ್ (ಬಿ.ಕೆ.ಯು.ಬಿ.) ಸಂಘಟನೆ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಕಾಯ್ದೆಗಳ ಸಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಈಗಾಗಲೇ ಅರ್ಜಿಗಳನ್ನು ದಾಖಲಿಸಲಾಗಿದೆ. ಅದರಲ್ಲಿ ತನ್ನ ಅರ್ಜಿಯನ್ನೂ ಸೇರ್ಪಡೆ ಮಾಡಿಕೊಳ್ಳಬೇಕೆಂದು ಮನವಿ ಸಲ್ಲಿಸಲಾಗಿದೆ. ಬಿ.ಕೆ.ಯು.ಬಿ.ಯ ಮಥುರಾ ಘಟಕದ ಅಧ್ಯಕ್ಷ ಭಾನು ಪ್ರತಾಪ್ ಸಿಂಗ್ ಅವರು ಅರ್ಜಿ ದಾಖಲಿಸಿದ್ದಾರೆ.

# ಸಾರಿಗೆ ಸಿಬ್ಬಂದಿ ಅನಿರ್ದಿಷ್ಟ ಮುಷ್ಕರ

## ಸರ್ಕಾರಿ ನೌಕರರೆಂದು ಪರಿಗಣಿಸಲು ಆಗ್ರಹಿಸುವ ಹೋರಾಟಕ್ಕೆ ರೈತರ ನಾಯಕತ್ವ

ಬೆಂಗಳೂರು, ಡಿ. 11 - ಸರ್ಕಾರಿ ನೌಕರರೆಂದು ಪರಿಗಣಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ರಾಜ್ಯ ರಸ್ತೆ ಸಾರಿಗೆ ನೌಕರರು ಅನಿರ್ದಿಷ್ಟ ಮುಷ್ಕರ ಆರಂಭಿಸಿದ್ದಾರೆ.

ಏಕಾಏಕಿ ರಾಜ್ಯಾದ್ಯಂತ ಬಸ್‌ಗಳು ರಸ್ತೆಗಿಳಿಯದ ಕಾರಣ ಸಾರ್ವಜನಿಕರು ಪರದಾಡುವಂತಾಗಿದೆ.

ಮುಷ್ಕರಕ್ಕೆ ರೈತ ಸಂಘದ ಮುಖಂಡರು ನೇರವಾಗಿ ಬೆಂಬಲ ವ್ಯಕ್ತಪಡಿಸಿ, ಮುಷ್ಕರದ ನಾಯಕತ್ವ ವಹಿಸಿಕೊಂಡಿದ್ದರೆ, ಇದಕ್ಕೆ ಹಿಂದಿನಿಂದ ರಾಜಕೀಯ ಮುಖಂಡರು ರಕ್ಷಣೆಯಾಗಿ ನಿಂತಿದ್ದಾರೆ.

ಸರ್ಕಾರಿ ನೌಕರರೆಂದು ಪರಿಗಣಿಸಲು ಸದ್ಯಕ್ಕೆ ಸಾಧ್ಯವಿಲ್ಲವೆಂದು ಸಾರಿಗೆ ಇಲಾಖೆ ಹೊಣೆ ಹೊತ್ತ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಸ್ಪಷ್ಟಪಡಿಸಿದ್ದಾರೆ.

**ಏಕಾಏಕಿ ಬಸ್‌ಗಳು ರಸ್ತೆಗಿಳಿಯದ ಕಾರಣ ಜನತೆ ಕಂಗಾಲು**

ಅವರು ಇಂದು ಮುಷ್ಕರ ಕರೆ ನೀಡಿರುವ ಸಂಘಟನೆಯನ್ನು ದೂರ ವಿಟ್ಟು, ನೋಂದಾಯಿತ ಸಂಘದ ಸದಸ್ಯರ ಜೊತೆ ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಈ ಮಧ್ಯ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೂಡಾ ಮುಷ್ಕರ ಕೈಬಿಡಿ, ನಿಮ್ಮ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುತ್ತದೆ. ಕೊರೊನಾ ಸಾಂಕ್ರಾಮಿಕ ರೋಗ ಸಂದರ್ಭದಲ್ಲಿ ಇಂತಹ ಮುಷ್ಕರ ಸರಿಯಲ್ಲ. ಸೋಂಕಿನಿಂದ ಆರ್ಥಿಕ ಪರಿಸ್ಥಿತಿಯ ಮೇಲೂ ಪರಿಣಾಮ ಬೀರಿದೆ ಎಂದು ಹೇಳಿದ್ದಾರೆ.

ಇದ್ಯಾವುದೇ ಮನವಿಗಳಿಗೆ ಸ್ಪಂದಿಸದ ನೌಕರರು, ನಮ್ಮ ನಾಯಕರು ಈಗ ರೈತ ಸಂಘದ ಮುಖಂಡರುಗಳು. ಅವರು ಹೇಳಿದಂತೆ ನಡೆಯುತ್ತೇವೆ ಎಂದು ಉದ್ಯೋಗಿಗಳು ಹೇಳಿದ್ದಾರೆ.

ನಮ್ಮನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕೆಂದು ಪಟ್ಟು ಹಿಡಿದಿದ್ದಾರೆ. ಕೊರೊನಾ ಸಂಕಷ್ಟ ಎಲ್ಲರಿಗೂ ಎದುರಾಗಿದೆ. ಇದರಿಂದ ನಾವು ಸಂಕಷ್ಟಕ್ಕೆ ಸಿಲುಕಿದ್ದೇವೆ.

ಏಳು ತಿಂಗಳ ಕಾಲ ವೇತನವೇ ಇರಲಿಲ್ಲ. ಸರ್ಕಾರಿ ನೌಕರರಿಗೆ ವೇತನ ನೀಡಿದಿರಿ. ನಮಗೆ ಮಾತ್ರ ವೇತನವಿಲ್ಲ. ನಾವು ಮಾತುಕತೆಗೂ ಸಿದ್ಧವಿಲ್ಲ. ನಮ್ಮನ್ನು ಸರ್ಕಾರಿ ನೌಕರರಾಗಿ ಪರಿಗಣಿಸಿ ಎಂದು ಚಾಲಕರು, ನಿರ್ವಾಹಕರು ಬಸ್ ಹತ್ತದೆ, (2ನೇ ಪುಟಕ್ಕೆ)





## ದಾವಣಗೆರೆಯಲ್ಲೂ ಮುಷ್ಕರ: ಪರದಾಡಿದ ಪ್ರಯಾಣಿಕರು

ದಾವಣಗೆರೆ, ಡಿ.11- ಸಾರಿಗೆ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವಂತೆ ಒತ್ತಾಯಿಸಿ ಕೆಎಸ್‌ಆರ್‌ಟಿಸಿ ನೌಕರರು, ಡಿಪೋದ ತಾಂತ್ರಿಕ ಸಿಬ್ಬಂದಿ ಸೇವೆಯಿಂದ ದೂರ ಉಳಿದು ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಇಂದಿನಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ಸರ್ಕಾರಿ ಬಸ್ ಸಂಚಾರ ಸ್ಥಗಿತಗೊಳಿಸಿ ಚಾಲಕರು, ನಿರ್ವಾಹಕರು ಪ್ರತಿಭಟನೆ ಆರಂಭಿಸಿದರೆ, ಡಿಪೋದ ತಾಂತ್ರಿಕ ವಿಭಾಗದ ಸಿಬ್ಬಂದಿಯೂ ತಮ್ಮೆಲ್ಲಾ ಕೆಲಸ ಕಾರ್ಯ ಸ್ಥಗಿತಗೊಳಿಸಿ ಹೋರಾಟದಲ್ಲಿ ಭಾಗಿಯಾದರು.

ದಿಢೀರ್ ಮುಷ್ಕರ ನಡೆಸಿದ ಪರಿಣಾಮ ಬಸ್‌ಗಳ ಸಂಚಾರ ಸ್ಥಗಿತಗೊಂಡು ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸಬೇಕಾಯಿತು. ಪದವಿ ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಹ ಬಸ್ ಗಳ ಸೇವೆ ಇಲ್ಲದೇ ಪರದಾಡಿದರು.

ಬಂದ ದಾರಿಗೆ ಸುಂಕ ಇಲ್ಲವೆಂಬಂತೆ ಕೆಲವರು ತಮ್ಮ ಮನೆ, ಬಂಧುಗಳ ಮನೆಗೆ ವಾಪಸ್ಸಾದರೆ ಮತ್ತೆ ಕೆಲವರು ನಿಲ್ದಾಣದ ಹೊರಗೆ ಖಾಸಗಿ ಬಸ್ ಗಳು, ಖಾಸಗಿ ವಾಹನಗಳ ಸಂಚಾರವಿದ್ದರೂ ಒಂದಕ್ಕೆ 2-3 ಪಟ್ಟು ಹೆಚ್ಚಿಗೆ ದರ ನೀಡುವ ಮೂಲಕ ಪ್ರಯಾಣ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಚಿತ್ರದುರ್ಗಕ್ಕೆ 70 ರೂ. ನೀಡುತ್ತಿದ್ದ ಪ್ರಯಾಣಿಕರು ಕೆಎಸ್ ಆರ್ ಟಿಸಿ ನೌಕರರ ಮುಷ್ಕರದಿಂದಾಗಿ 140-160 ರೂ. ಕೊಟ್ಟು ಖಾಸಗಿ ಬಸ್, ಇತರೆ ಖಾಸಗಿ ವಾಹನಗಳಲ್ಲಿ ಸಂಚರಿಸಬೇಕಾಯಿತು. ಗ್ರಾಮೀಣ ಭಾಗಕ್ಕೆ ತೆರಳಬೇಕಿದ್ದವರು ಪ್ರಯಾಣಿಕರ ಆಟೋ, ಗೂಡ್ಸ್ ವಾಹನಗಳನ್ನೇರಿ ಪ್ರಯಾಣಕ್ಕೆ ಮುಂದಾದರು.

ದಾವಣಗೆರೆ ಎರಡು, ಹರಿಹರದ ಒಂದು ಡಿಪೋ ಸೇರಿ 164 ಬಸ್‌ಗಳಲ್ಲಿ ಮುದ್ದೇ ಬಿಹಾಳ್, ಶ್ರೀಶೈಲ, ಹುಬ್ಬಳ್ಳಿ ಮತ್ತು ಬೆಂಗಳೂರಿಗೆ ನಾಲ್ಕು ಬಸ್‌ಗಳು ಮಾತ್ರ ಸಂಚರಿಸಿದವು. ಉಳಿದೆಲ್ಲ ಬಸ್ ಸೇವೆ ಸ್ಥಗಿತಗೊಳಿಸಲಾಗಿತ್ತು.

ಸುಮಾರು 350ಕ್ಕೂ ಹೆಚ್ಚು ಬಸ್ಸುಗಳು ದಾವಣಗೆರೆ ವಿಭಾಗಕ್ಕೆ ಸೇರಿವೆ. ಇದರಲ್ಲಿ ನಿತ್ಯವೂ ಇಲ್ಲಿಂದ 180ಕ್ಕೂ ಹೆಚ್ಚು ಬಸ್‌ಗಳು ಗ್ರಾಮೀಣ ಪ್ರದೇಶ, ರಾಜ್ಯದ ವಿವಿಧ ಜಿಲ್ಲೆ, ಅನ್ಯ ರಾಜ್ಯಗಳಿಗೆ ಸಂಚಾರ ಆರಂಭಿಸಬೇಕಿತ್ತು. ಆದರೆ, ಮುಷ್ಕರದಿಂದಾಗಿ ಕೇವಲ 4 ಸರ್ಕಾರಿ ಬಸ್ ಗಳ ಸಂಚಾರ ಇತ್ತು.

ಕರ್ತವ್ಯಕ್ಕೆ ಹಾಜರಾದ ಮಹಿಳೆಯರೂ ಸೇರಿದಂತೆ ಸಿಬ್ಬಂದಿ (3ನೇ ಪುಟಕ್ಕೆ)

## ಎಲೂರು ನಿಗೂಢ ರೋಗಕ್ಕೆ ಅಕ್ಕಿ, ತರಕಾರಿಗಳಲ್ಲಿನ ಲೋಹ, ಕೀಟನಾಶಕ ಕಾರಣ



ಅಮರಾವತಿ, ಡಿ.11- ಅಕ್ಕಿಯಲ್ಲಿ ಸೀಸ, ಪಾದರಸ ಹಾಗೂ ನಿಕ್ಕಲ್‌ಗಳು ಇದ್ದದ್ದು ಮತ್ತು ತರಕಾರಿಗಳಲ್ಲಿ ಕೀಟನಾಶಕಗಳು ಹೆಚ್ಚಾಗಿದ್ದುದೇ ಆಂಧ್ರ ಪ್ರದೇಶದ ಎಲೂರು ನಗರದಲ್ಲಿ ನಿಗೂಢವಾದ ರೋಗ ಕಾಣಿಸಿಕೊಳ್ಳಲು ಕಾರಣವಾಗಿದೆ ಎಂದು ಹಲವು ವರದಿಗಳು ತಿಳಿಸಿವೆ.

ಶುಕ್ರವಾರ ನಾಲ್ಕು ಹೊಸ ಪ್ರಕರಣಗಳು ಕಾಣಿಸಿಕೊಂಡಿದ್ದು, ಒಟ್ಟು 613 ಜನರು ಅಸ್ವಸ್ಥರಾಗಿದ್ದಾರೆ. ಇವರಲ್ಲಿ 13 ಜನರು ಮಾತ್ರ ಇನ್ನೂ ಅಸ್ವಸ್ಥರಾಗಿದ್ದು, ಉಳಿದವರು ಗುಣಮುಖರಾಗಿದ್ದಾರೆ.

ಎ.ಐ.ಐ.ಎಂ.ಎಸ್. ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿಗಳ ತಂಡಗಳು ತಮ್ಮ ವರದಿಯನ್ನು ಸಲ್ಲಿಸಿದ್ದು, ಅಸ್ವಸ್ಥರ ರಕ್ತದಲ್ಲಿ ಸೀಸ ಹಾಗೂ ನಿಕ್ಕಲ್ ಕಂಡು ಬಂದಿದೆ. ಆದರೆ, ಕುಡಿಯುವ ನೀರಿನಲ್ಲಿ ಈ ಅಂಶಗಳಿಲ್ಲ ಎಂದು ತಿಳಿಸಲಾಗಿದೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ (3ನೇ ಪುಟಕ್ಕೆ)

## ಅಲೋಪತಿ ವೈದ್ಯರಿಂದ ಒಪಿಡಿ ಬಂದ್

### ಆಯುರ್ವೇದ ವೈದ್ಯರಿಗೆ ಶಸ್ತ್ರ ಚಿಕಿತ್ಸೆಗೆ ಅವಕಾಶ ನೀಡಿದ್ದಕ್ಕೆ ಖಂಡನೆ



ದಾವಣಗೆರೆ, ಡಿ.11- ಕೇಂದ್ರ ಸರ್ಕಾರವು ಆಯುರ್ವೇದ ವೈದ್ಯರಿಗೆ ಶಸ್ತ್ರ ಚಿಕಿತ್ಸೆ ನಡೆಸಲು ಅವಕಾಶ ನೀಡಿರುವುದನ್ನು ವಿರೋಧಿಸಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಕರೆಯ ಮೇರೆಗೆ ಅಲೋಪಥಿ ವೈದ್ಯರು ಶುಕ್ರವಾರ ನಗರದಲ್ಲಿ ಒಪಿಡಿ ಸೇವೆ ಸ್ಥಗಿತಗೊಳಿಸುವ ಮೂಲಕ ಪ್ರತಿಭಟಿಸಿದರು.

ತುರ್ತು ಚಿಕಿತ್ಸೆ, ಹೆರಿಗೆ ವಿಭಾಗ, ಕೋವಿಡ್ ಸೇವೆಗಳನ್ನು ಹೊರತುಪಡಿಸಿ, ನಗರದ ಬಹುತೇಕ ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಮ್, ಕ್ಲಿನಿಕ್‌ಗಳಲ್ಲಿ ಹೊರರೋಗಿಗಳ ಸೇವೆ ಬೆಳಿಗ್ಗೆ 6 ರಿಂದ ಸಂಜೆ 6ರವರೆಗೆ ಸ್ಥಗಿತಗೊಂಡಿತ್ತು.

ರೋಗಿಗಳು ಸಕಾಲಕ್ಕೆ ಒಪಿಡಿ ಚಿಕಿತ್ಸೆ ದೊರೆಯದೆ ಪರದಾಡಬೇಕಾಯಿತು. ಮುಷ್ಕರದಿಂದಾಗಿ ಜಿಲ್ಲಾ ಚಿಗಟೇರಿ ಆಸ್ಪತ್ರೆ ಹಾಗೂ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ರೋಗಿಗಳ ಸಂಖ್ಯೆ ಎಂದಿಗಿಂತ ಹೆಚ್ಚಾಗಿತ್ತು.

ಮುಷ್ಕರನಿರತ ಅಲೋಪಥಿ ವೈದ್ಯರು ಜಿಲ್ಲಾಡಳಿತದ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಇದೇ ವೇಳೆ ಕೇಂದ್ರದ ನಿರ್ಧಾರ ಸ್ವಾಗತಿಸಿ ಆಯುರ್ವೇದ ವೈದ್ಯರು ವಿನೂತನ ರೀತಿಯಲ್ಲಿ ಅಭಿನಂದನೆ ಸಲ್ಲಿಸಿದರು.

ಇದೇ ವೇಳೆ ಕೇಂದ್ರ ಸರ್ಕಾರ ಆಯುರ್ವೇದದಲ್ಲಿ ಶಲ್ಯ ಮತ್ತು ಶಾಲಾಕ್ಯ ತಂತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ವೈದ್ಯರಿಗೆ ಶಸ್ತ್ರಚಿಕಿತ್ಸೆ ನಡೆಸಲು ಅವಕಾಶ ನೀಡಿರುವುದನ್ನು ಸ್ವಾಗತಿಸಿ ಜಿಲ್ಲೆಯ ನ್ಯಾಷನಲ್ (3ನೇ ಪುಟಕ್ಕೆ)

## 15 ರಿಂದ ರಾಗಿ ಖರೀದಿ ಕೇಂದ್ರ ಆರಂಭ

### ಎಕರೆಗೆ 10 ಕ್ವಿಂ.ನಂತೆ ಗರಿಷ್ಠ 50 ಕ್ವಿಂ. ಖರೀದಿ : ಡಿಸಿ ಬೀಳಗಿ

ದಾವಣಗೆರೆ, ಡಿ.11- ಜಿಲ್ಲೆಯಲ್ಲಿ ಡಿ.15 ರಿಂದ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಕೇಂದ್ರವನ್ನು ಆರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಬೆಂಬಲ ಬೆಲೆ ಯೋಜನೆಯಡಿ ರಾಗಿ ಮತ್ತು ಬಿಳಿ ಜೋಳ ಖರೀದಿ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಗಿಗೆ ಸರ್ಕಾರದ ಕನಿಷ್ಠ ಬೆಂಬಲ ಬೆಲೆ 3295 ರೂ.ಇದ್ದು ಮಾರುಕಟ್ಟೆ ಬೆಲೆಗಿಂತ ಹೆಚ್ಚಾಗಿದೆ. ಹಾಗಾಗಿ ಮಧ್ಯವರ್ತಿಗಳು ಇದರ ಲಾಭ ಪಡೆಯದಂತೆ ಯೋಜನೆಯ ಪ್ರಯೋಜನ ಅರ್ಹ (2ನೇ ಪುಟಕ್ಕೆ)

**ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಅರ್ಹ ರೈತರಿಗೆ ಪ್ರಯೋಜನ ದೊರೆಯುವಂತೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಸೂಚನೆ.**


## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ನಾಗರತ್ನಮ್ಮ ಎಸ್.ಕೆ.

ಜನನ : 16.11.1948 - ನಿಧನ : 12.12.2016

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ ...

ಪತಿ : ಶ್ರೀ ಎಸ್.ಟಿ. ಕುಸುಮಶ್ರೇಷ್ಠಿ, ವರ್ತಕರು, ದಾವಣಗೆರೆ.
ಮಕ್ಕಳಾದ : ಡಾ|| ಎಸ್.ಕೆ. ವೆಂಕಟೇಶ್ ಗುಪ್ತ ಮತ್ತು ಶ್ರೀಮತಿ ಡಾ|| ಮಾದವಿ ಗುಪ್ತ
ಎಸ್.ಕೆ. ಪ್ರಶಾಂತ ಗುಪ್ತ ಮತ್ತು ಶ್ರೀಮತಿ ದೀಪಾ ಎಸ್.ಪಿ.
ಎಸ್.ಕೆ. ತಿಮ್ಮರಾಜ ಗುಪ್ತ ಮತ್ತು ಶ್ರೀಮತಿ ಶ್ರೀ ಗೌರಿ
ಎಸ್.ಪಿ. ಸಂದೀಪ್ ಮತ್ತು ಶ್ರೀಮತಿ ಪೂರ್ಣಿಮಾ ಹಾಗೂ ಬಂಧು-ಮಿತ್ರರು



## ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,

# 311, ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ದಾವಣಗೆರೆ - 577 006.



ಡಾ. ಜೆ.ಆರ್. ಷಣ್ಮುಖಪ್ಪ
ಅಧ್ಯಕ್ಷರು



ಬಿ.ವಿ. ಚಂದ್ರಶೇಖರ್ - ನಿರ್ದೇಶಕರು
ಜೆ.ಎಸ್. ವೇಣುಗೋಪಾಲರೆಡ್ಡಿ - ನಿರ್ದೇಶಕರು
ಕೆ.ಹೆಚ್. ಷಣ್ಮುಖಪ್ಪ - ನಿರ್ದೇಶಕರು
ಜಗದೀಶಪ್ಪ ಬಣಕಾರ - ನಿರ್ದೇಶಕರು
ಆರ್.ಜಿ. ಶ್ರೀನಿವಾಸಮೂರ್ತಿ - ನಿರ್ದೇಶಕರು
ಜಿ.ಎನ್. ಸ್ವಾಮಿ - ನಿರ್ದೇಶಕರು
ಬಿ.ಹಾಲೇಶಪ್ಪ - ನಿರ್ದೇಶಕರು
ಟಿ.ಜಿ. ಜೀವನ್‌ಪ್ರಕಾಶ್ - ಸರ್ಕಾರದ ನಾಮ ನಿರ್ದೇಶನ ನಿರ್ದೇಶಕರು
ಹೆಚ್.ಕೆ. ಪಾಲಾಕ್ಷಪ್ಪ - ಅಪೆಕ್ಸ್ ಬ್ಯಾಂಕ್ ಪ್ರತಿನಿಧಿ
ಜಯಪ್ರಕಾಶ್ ಬಿ. - ಸಹಕಾರ ಸಂಘಗಳ ಉಪನಿಬಂಧಕರು
ಎಂ.ಹೆಚ್. ಲಕ್ಷ್ಮಣ್ - ಮುಖ್ಯಕಾರ್ಯನಿರ್ವಹಣಾಧಿಕಾರಿ
ವಿ. ರವೀಂದ್ರ - ನಬಾರ್ಡ್ ಅಧಿಕಾರಿಗಳು



ಬಿ. ಶೇಖರಪ್ಪ
ಉಪಾಧ್ಯಕ್ಷರು

**2019-20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ**

2019-20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 12-12-2020ರಂದು ಶನಿವಾರ ಬೆಳಿಗ್ಗೆ 11.30 ಕ್ಕೆ ವರ್ಚುವಲ್ ಮೀಟಿಂಗ್ ಮೂಲಕ ಬ್ಯಾಂಕಿನ ಅಧ್ಯಕ್ಷರಾದ ಡಾ. ಜೆ.ಆರ್. ಷಣ್ಮುಖಪ್ಪ ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿರುತ್ತದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ತಮ್ಮ ಸಂಘದ ಪ್ರತಿನಿಧಿಯ ವಾಟ್ಸಾಪ್ ಹೊಂದಿದ ಮೊಬೈಲ್‌ನಲ್ಲಿ ಲಾಗಿನ್ ಆಗಿ ಆನ್‌ಲೈನ್ ಮೂಲಕ ಸಲಹೆ ಮತ್ತು ಸಹಕಾರ ನೀಡಲು ಕೋರಲಾಗಿದೆ.

ಸ್ಥಳ : ದಾವಣಗೆರೆ
ದಿನಾಂಕ : 25-11-2020

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಮುಖ್ಯಕಾರ್ಯನಿರ್ವಹಣಾಧಿಕಾರಿ

# ದಾವಣಗೆರೆಯಲ್ಲೂ ಮುಷ್ಕರ: ಪರದಾಡಿದ ಪ್ರಯಾಣಿಕರು

**(1ನೇ ಪುಟದಿಂದ)** ಮುಷ್ಕರದಲ್ಲಿ ತೊಡಗಿದ್ದರೆ ಚಾಲಕರು, ನಿರ್ವಾಹಕರೂ ನಿಲ್ದಾಣದೊಳಗೆ ಬಂದರೂ ಕೆಲಸಕ್ಕೆ ಹಾಜರಾಗಲಿಲ್ಲ. ಕೆಎಸ್‌ಆರ್‌ಟಿಸಿ ಅಧಿಕಾರಿಗಳೂ ಬೆಳಿಗ್ಗೆಯಿಂದಲೇ ಚಾಲಕರು, ನಿರ್ವಾಹಕರಿಗೆ ನಿರಂತರ ದೂರವಾಣಿ ಮೂಲಕ ಕರೆಗೆ ಪ್ರಯತ್ನಿಸುತ್ತಿದ್ದರೂ ಯಾರೊಬ್ಬರೂ ಸಂಪರ್ಕಕ್ಕೆ ಸಿಕ್ಕಿಲ್ಲ. ಮತ್ತೆ ಕೆಲವರು ಅಧಿಕಾರಿಗಳ ಮಾತಿಗೆ ಕಿವಿಗೊಡದೇ ತಮ್ಮ ಮುಂದಿನ ಹೋರಾಟದ ರೂಪುರೇಷೆಯ ಚರ್ಚೆಯಲ್ಲಿ ತೊಡಗಿದ್ದರು.

ನಾಳೆಯಿಂದ ಹೋರಾಟ ಮತ್ತೆ ಯಾವ ಸ್ವರೂಪ ಪಡೆಯುತ್ತದೆಂಬ ಆತಂಕ ಮನೆ ಮಾಡಿದೆ. ಮುಷ್ಕರ ನಿರತ ಸಿಬ್ಬಂದಿ ನಿಲ್ದಾಣದಲ್ಲೇ ಅಡುಗೆ ಮಾಡಿಕೊಂಡು ಊಟ ಮಾಡುವ ಮೂಲಕ ಹೋರಾಟ ಮತ್ತಷ್ಟು ತೀವ್ರತೆ ಪಡೆಯುವ ಸೂಚನೆಯನ್ನು ಪರೋಕ್ಷವಾಗಿ ನೀಡಿದರು.

**ಸಾರಿಗೆ ನೌಕರಿಗೆ ಸೇರುವಾಗ ಷರತ್ತು ಹಾಕಬೇಕಿತ್ತು : ಎಂಪಿಆರ್**

ಕೆಎಸ್‌ಆರ್‌ಟಿಸಿ ನೌಕರರು ತಮ್ಮನ್ನು ಸರ್ಕಾರಿ ನೌಕರರು ಎಂದು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂಬ ಬೇಡಿಕೆಗೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಪ್ರತಿಕ್ರಿಯೆ ವ್ಯಕ್ತಪಡಿಸಿ, ಸಾರಿಗೆ ನೌಕರಿಗೆ ಸೇರಬೇಕಾದರೆ ನೀವು ಷರತ್ತು ಹಾಕಬೇಕಿತ್ತು ಎಂದು ಸಾರಿಗೆ ನೌಕರರನ್ನು ಪ್ರಶ್ನಿಸಿದ್ದಾರೆ.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಈಗ ಪ್ರತಿಭಟನೆ ಮಾಡೋದು ಎಷ್ಟು ಸರಿ. ನೀವು ಕೂಡ ಸರ್ಕಾರಿ ನೌಕರರು ಇದ್ದಂತೆ. ಸಾಂವಿಧಾನಿಕವಾಗಿ ಪ್ರತಿಭಟನೆ ಎಲ್ಲರ ಹಕ್ಕು. ಆದರೆ, ಸಾರ್ವಜನಿಕರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಹೇಳಿದ್ದಾರೆ.

ಲಾಕ್‌ಡೌನ್‌ನಿಂದಾಗಿ ದೇಶ ಬಹುತೇಕ ಸಂಕಷ್ಟದಲ್ಲಿದೆ. ರಾಜ್ಯವೂ ಇದಕ್ಕೆ ಹೊರತಲ್ಲ. ಕೆಎಸ್‌ಆರ್‌ಟಿಸಿ ನೌಕರರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಸಿಎಂ ಅವರೊಂದಿಗೆ ಮುಕ್ತ ಚರ್ಚೆಗೆ ಅವಕಾಶವಿದೆ. ಅವರ ಬೇಡಿಕೆಗಳ ಈಡೇರಿಕೆಯ ಅವಕಾಶಗಳ ಬಗ್ಗೆ ಚರ್ಚಿಸಿ ಪರಿ ಹಾರ ಮಾಡಿಕೊಳ್ಳಬಹುದು. ಸಾರ್ವಜನಿಕರಿಗೆ ತೊಂದರೆ ಆಗದಂತೆ ಪ್ರತಿಭಟಿಸುವಂತೆ ಸಲಹೆ ನೀಡಿದರು.

## ಲೋಹ ಕಾರಣ

**(1ನೇ ಪುಟದಿಂದ)** ನ್ಯೂಟ್ರಿಷನ್ ವರದಿಯ ಪ್ರಕಾರ ಅಕ್ಕಿಯಲ್ಲಿ ಪಾದರಸ ಹಾಗೂ ತರಕಾರಿಗಳಲ್ಲಿ ಹೆಚ್ಚಿನ ಪ್ರಮಾಣದ ಕೀಟನಾಶಕ ಇರುವುದು ಕಂಡು ಬಂದಿದೆ. ಅಸ್ವಸ್ಥರ ರಕ್ತದಲ್ಲಿ ಆರ್ಗೊನೊಫಾಸ್ಫರಸ್ ಇರುವುದು ಕಂಡು ಬಂದಿದೆ. ಆದರೆ, ಇದು ಹೇಗೆ ಮನುಷ್ಯರ ದೇಹ ಪ್ರವೇಶಿಸಿತು ಎಂಬು ದನ್ನು ಅಧ್ಯಯನ ಮಾಡಲಾಗಿಲ್ಲ.

ಆಂಧ್ರ ಪ್ರದೇಶದ ಮಾಲಿನ್ಯ ನಿಯಂತ್ರಣ ಮಂಡಳಿ ಯು ಗಾಳಿ ಹಾಗೂ ನೀರಿನ ಬಗ್ಗೆ ಅಧ್ಯಯನ ಮಾಡಿದೆ. ಇದ ರಲ್ಲಿ ಯಾವುದೇ ಭಾರೀ ಲೋ ಹಗಳು ಇರುವುದು ಕಂಡು ಬಂದಿಲ್ಲ. ಹಾಲಿನಲ್ಲಿ ಹಾನಿಕಾರಕ ಅಂಶಗಳು ಕಂಡು ಬಂದಿಲ್ಲ ಎಂದು ಇನ್‌ಸ್ಟಿಟ್ಯೂಟ್ ಆಫ್ ಪ್ರಿವೆಂಟಿವ್ ಮೆಡಿಸಿನ್ ವರದಿ ತಿಳಿಸಿದೆ.

## ಒಪಿಡಿ ಬಂದ್

**(1ನೇ ಪುಟದಿಂದ)** ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ ವೈದ್ಯರು ಶುಕ್ರವಾರ ಉಚಿತ ಸೇವೆ ನೀಡಿದರು.

ಕೈಗೆ ಗುಲಾಬಿ ಬಣ್ಣದ ರಿಬ್ಬನ್ ಧರಿಸುವ ಮೂಲಕ ತಮ್ಮ ಕ್ಲಿನಿಕ್, ಆಸ್ಪತ್ರೆ, ನರ್ಸಿಂಗ್ ಹೋಮ್‌ಗಳಲ್ಲಿ ಹೊರರೋಗಿಗಳಿಗೆ ಉಚಿತ ಆರೋಗ್ಯ ತಪಾಸಣೆ ಮಾಡಿ, ಚಿಕಿತ್ಸೆ ನೀಡುವ ಮುಖಾಂತರ ಕೇಂದ್ರ ಸರ್ಕಾರ ಮತ್ತು ಸಿಸಿಐಎಂ ಅಧಿಸೂಚನೆಗೆ ಬೆಂಬಲಿಸಿದರು.

## ಹೊನ್ನಾಳಿಯಲ್ಲಿ ಇಂದು ಕಾಂಗ್ರೆಸ್ ಕಾರ್ಯಕರ್ತರ ಸಭೆ

ಹೊನ್ನಾಳಿ ತಾಲ್ಲೂಕು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಸಭೆಯು ಇಂದು ಬೆಳಗ್ಗೆ 11 ಗಂಟೆಗೆ ಸರ್ಕಾರಿ ನೌಕರರ ಭವನದಲ್ಲಿ ನಡೆಯಲಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಚ್. ಬಿ. ಮಂಜಪ್ಪ ತಿಳಿಸಿದ್ದಾರೆ. ಗ್ರಾಮ ಪಂಚಾಯ್ತಿ ಚುನಾವಣೆ ಹಿನ್ನೆಲೆಯಲ್ಲಿ ಕರೆಯಲಾಗಿರುವ ಸಭೆಗೆ ಮಾಜಿ ಶಾಸಕ ಶಾಂತನಗೌಡ, ಪಕ್ಷದ ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ ಸಾಸ್ವೆಹಳ್ಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗದಿಗೇಶ್ ಆಗಮಿಸಲಿದ್ದು, ಪಕ್ಷದ ಕಾರ್ಯಕರ್ತರು ಚುನಾವಣಾ ಆಕಾಂಕ್ಷಿಗಳು ಆಗಮಿಸುವಂತೆ ಮನವಿ ಮಾಡಿದ್ದಾರೆ.










## ಹರಿಹರದಲ್ಲಿ ಇಂದು - ನಾಳೆ ಶ್ರೀ ಅಯ್ಯಪ್ಪಸ್ವಾಮಿ ದೀಪೋತ್ಸವ



ಹರಿಹರ, ಡಿ11- ನಗರದ ಶ್ರೀ ಅಯ್ಯಪ್ಪಸ್ವಾಮಿ ಸೇವಾ ಸಮಿತಿಯಿಂದ ಶ್ರೀ ಅಯ್ಯಪ್ಪಸ್ವಾಮಿ ದೀಪೋತ್ಸವವನ್ನು ತುಂಗಭದ್ರಾ ನದಿಯ ದಡದಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ನಾಳೆ ದಿನಾಂಕ 12 ರ ಶನಿವಾರ ಮತ್ತು ನಾಡಿದ್ದು ದಿನಾಂಕ 13 ರ ಭಾನುವಾರ ಹಮ್ಮಿಕೊಳ್ಳಲಾಗಿದೆ.

ನಾಳೆ ಶನಿವಾರ ಬೆಳಗ್ಗೆ ವಿವಿಧ ಪೂಜೆಗಳು, ಸಂಜೆ 4 ಗಂಟೆಗೆ ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಮೆರವಣಿಗೆ ಜರುಗಲಿದೆ.

ದಿನಾಂಕ 13 ರ ಭಾನುವಾರ ಶ್ರೀ ಅಯ್ಯಪ್ಪಸ್ವಾಮಿ, ಸುಬ್ರಮಣ್ಯ ಸ್ವಾಮಿ, ಗಣಪತಿ ಸ್ವಾಮಿಗೆ ಬೆಳಿಗ್ಗೆ ಪೂಜೆ, 11.30 ಕ್ಕೆ ಧರ್ಮಶಾಸ್ತ್ರ ಪ್ರೀತ್ಯಾರ್ಥ ಅನ್ನದಾನ ನಡೆಯುತ್ತದೆ. ಈ ಎಲ್ಲಾ ಕಾರ್ಯಗಳು ಗುರುಸ್ವಾಮಿ ರುದ್ರುಮುನಿಸ್ವಾಮಿ, ಚಿದಂಬರ ಜೋಯಿಷ್, ಮಹಾಂತೇಶ್, ಚಿಂಚೊಳ್ಳಿ ಮಂಜುನಾಥ್, ಲಿಂಗರಾಜ್ ಪಾಟೀಲ್ ನೇತೃತ್ವದಲ್ಲಿ ನಡೆಯುತ್ತವೆ

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, ಶಾಂತಿನಗರ, ಕುಂದುವಾಡ ರಸ್ತೆ, ಮಹಾನಗರಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ, ಸುತ್ತಮುತ್ತ, ನಿಜಲಿಂಗಪ್ಪ ಬಡಾವಣೆ, ರಿಂಗ್‌ರೋಡ್, ಕುಂದುವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತ ಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಇರುವುದಿಲ್ಲ.

## ಸುರೇಶ್, ಬಿಜೆಪಿ ಪ್ರಕೋಷ್ಠ ಸಂಚಾಲಕ



ದಾವಣಗೆರೆ,ಡಿ.11- ರಾಜ್ಯ ಬಿಜೆಪಿ ಶಿಕ್ಷಕರ ಪ್ರಕೋಷ್ಠಗಳ ಸಂಚಾಲಕರನ್ನಾಗಿ ನಗರದ ಶ್ರೀ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್ ತಿಳಿಸಿದ್ದಾರೆ.

## ನಾಳೆ ಯರಗುಂಟೆ ಕರಿಬಸಜ್ಜಯ್ಯ ರಥೋತ್ಸವ



ದಾವಣಗೆರೆ, ಡಿ.11- ನಾಡಿದ್ದು ದಿನಾಂಕ 13ರ ಭಾನುವಾರ ಯರಗುಂಟೆ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ರಥೋತ್ಸವ ನಡೆಯಲಿದೆ ಎಂದು ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ಗದ್ದಿಗೆ ಮಠದ ಶ್ರೀ ಪರಮೇಶ್ವರ ಸ್ವಾಮೀಜಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ನಾಳೆ ದಿನಾಂಕ 12ರ ಶನಿವಾರ ಬೆಳಿಗ್ಗೆ ವಿವಿಧ ಪೂಜಾ ಕಾರ್ಯಕ್ರಮಗಳು, ಮಧ್ಯಾಹ್ನ ಮಹಾಪ್ರಸಾದ ಏರ್ಪಾಡಾಗಿದೆ. ರಾತ್ರಿ 8 ಗಂಟೆಗೆ ಶ್ರೀಮಠದಲ್ಲಿ ಅರಿಶಿಣ ಎಣ್ಣೆ ಕಾರ್ಯಕ್ರಮ. ರಥದ ಕಳಸ ಮಠಕ್ಕೆ ತರುವುದು ಹಾಗೂ ಕಳಸಾರೋಹಣ ಕಾರ್ಯಕ್ರಮವಿದೆ.

ಪತ್ರಿಕಾಗೋಷ್ಠಿಯಲ್ಲಿ ಆರ್.ಟಿ. ವಿಜಯಕುಮಾರ್, ಎಂ.ಮಂಜುನಾಥ್, ಎನ್.ಎಸ್. ರಾಜು, ಎ.ಸಿ. ಕರಿಬಸಪ್ಪ, ಎನ್.ಪಿ. ರಾಕೇಶ್ ಉಪಸ್ಥಿತರಿದ್ದರು.

## ಅಕ್ಟೋಬರ್‌ನಲ್ಲಿ ಶೇ.3.6ರ ಕೈಗಾರಿಕಾ ಬೆಳವಣಿಗೆ

ನವದೆಹಲಿ, ಡಿ. 11 - ಅಕ್ಟೋಬರ್ ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ದರ ಶೇ.3.6ಕ್ಕೆ ಏರಿಕೆಯಾಗಿದೆ. ಉತ್ಪಾದನಾ ವಲಯ ಹಾಗೂ ವಿದ್ಯುತ್ ವಲಯಗಳು ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡಿವೆ. ಕೈಗಾರಿಕಾ ಉತ್ಪನ್ನ ದರದ ಸೂಚ್ಯಂಕದ ಪ್ರಕಾರ ಉತ್ಪಾದನಾ ವಲಯ ಶೇ.3.5 ಹಾಗೂ ವಿದ್ಯುತ್ ವಲಯ ಶೇ.11.2ರ ಬೆಳವಣಿಗೆ ಕಂಡಿದೆ. ಇದೇ ತಿಂಗಳಲ್ಲಿ ಗಣಿ ವಲಯದಲ್ಲಿ ಶೇ.1.5ರಷ್ಟು ಕುಸಿತವಾಗಿದೆ.

## ನಗರಕ್ಕೆ ಇಂದು ಸಚಿವ ಈಶ್ವರಪ್ಪ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್ ಈಶ್ವರಪ್ಪ ಅವರು ಇಂದು ಬೆಳಿಗ್ಗೆ 9 ಗಂಟೆಗೆ ನಗರಕ್ಕೆ ಆಗಮಿಸಿ, ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ಶಿವಮೊಗ್ಗಕ್ಕೆ ತೆರಳುವರು.

## ನಗರದ ಪಂಚ ದೇವಸ್ಥಾನದಲ್ಲಿ ಕಾರ್ತಿಕ

ಪಿ.ಬಿ. ರಸ್ತೆಯಲ್ಲಿರುವ ಪಂಚ ದೇವಸ್ಥಾನದಲ್ಲಿ ಇಂದು ಸಂಜೆ 6.30ಕ್ಕೆ ಕಾರ್ತಿಕೋತ್ಸವ ಜರುಗಲಿದೆ. ಬೆಳಿಗ್ಗೆ ಪಂಚ ದೇವರುಗಳಿಗೆ ಪಂಚಾಮೃತ, ತೈಲಾಭಿಷೇಕ, ರುದ್ರಾಭಿಷೇಕ, ನವಗ್ರಹ ಶಾಂತಿ ವಿಶೇಷ ಪೂಜೆ ನಡೆಯಲಿದೆ.





















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte